# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಚಾಮರಾಜನಗರ.

**ಸ್ಪೆಷಲ್ ಕೇಸ್ ಸಂಖ್ಯೆ:** 42/2021

**ಚಾಸಾ**–10

**ಫ್ರಾಸಾ**–4

**ದಿನಾಂಕ 13.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿದಾರರ ಹೆಸರು** | : ಮಹದೇವಸ್ವಾಮಿ |
| **ತಂದೆಯ ಹೆಸರು** | : ಪುಟ್ಟಸ್ವಾಮಿ |
| **ವಯಸ್ಸು** | : 46 ವರ್ಷ |
| **ವೃತ್ತಿ** | : ಹೆಡ್ ಕಾನ್ಸ್ ಟೇಬಲ್, ಯಳಂದೂರು ಪೊಲೀಸ್ ಠಾಣೆ |
| **ವಾಸ ಸ್ಥಳ** | : ಚಾಮರಾಜನಗರ |

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ನಾನು 2016 ರಿಂದ 2019 ರವರೆಗೆ ಚಾಮರಾಜನಗರ ಸೆನ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ–1 ರವರು ಗೊತ್ತು. ಅವರು ನಮ್ಮ ಪೊಲೀಸ್ ಇನ್ಸ್ ಪೆಕ್ಟರ್. ಚಾಸಾ–4 ರಿಂದ ಚಾಸಾ–9 ಹಾಗೂ ಚಾಸಾ–11 ಗೊತ್ತು. ಅವರು ನಮ್ಮ ಸಹೋದ್ಯೋಗಿಗಳು.

ದಿ:13.11.2018 ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಪಂಚರಾದ ಚಾಸಾ–2, 3 ಮತ್ತು ಚಾಸಾ–4 ರವರು ಚಾಮರಾಜನಗರ ಪೂರ್ವ ಪೊಲೀಸ್ ಠಾಣಾ ಸರಹದ್ದು ಕೋಳಿಪಾಳ್ಯ ಸುತ್ತ ಮುತ್ತ ಗ್ರಾಮಗಳಲ್ಲಿ ಗಾಂಜಾ ಗಿಡ ವನ್ನು ಬೆಳದಿರುವ ಬಗ್ಗೆ ಹಾಗೂ ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಅದರಂತೆ ನಾವು ಸ್ಥಳಕ್ಕೆ ಹೋಗುವ ಮಾಹಿತಿ

ಸಂಗ್ರಹಿಸುತ್ತಿದ್ದಾಗ ಬೆಳಿಗ್ಗೆ 11.30 ರ ಸಮಯದಲ್ಲಿ ಕುಂಬಾರ ಗುಂಡಿ ಸರ್ಕಲ್ ಬಳಿ ಬಾತ್ಮಿದಾರರೊಬ್ಬರು ಮೂಕನಪಾಳ್ಯ ಗ್ರಾಮದ ಲೇಟ್.ಮುನಿಯಶೆಟ್ಟಿ ರವರ ಮಗ ರವೀನಾಯ್ಕ ಎಂಬುವವರ ಜಮೀನಿನಲ್ಲಿ ಗಾಂಜಾ ಗಿಡ ಬೆಳೆದಿರುವ ಬಗ್ಗೆ ಮಾಹಿತಿ ನೀಡಿರುತ್ತಾರೆ. ಹೆಚ್ಚಿನ ಮಾಹಿತಿ ಸಂಗ್ರಹಿಸಿ ನಮ್ಮ ಜೊತೆಯಲ್ಲಿ ಬಂದಿದ್ದ ಚಾಸಾ-4 ರವರು ಈ ವಿಚಾರವನ್ನು ಚಾಸಾ-1 ರವರಿಗೆ ದೂರವಾಣಿ ಮೂಲಕ ತಿಳಿಸಿದಾಗ ಚಾಸಾ-1 ರವರು ನೀವು ಅಲ್ಲೇ ಮರೆಯಲ್ಲಿ ಇರಿ, ತಾನು ಬರುವುದಾಗಿ ತಿಳಿಸಿರುತ್ತಾರೆ.

ಮಧ್ಯಾಹ್ನ ಸುಮಾರು 2.15 ರ ಸಮಯದಲ್ಲಿ ಚಾಸಾ-1 ರವರು ಠಾಣಾ ಸಿಬ್ಬಂದಿ ಚಾಸಾ-6, ಚಾಸಾ-7 ಹಾಗೂ ಚಾಸಾ-2 ಮತ್ತು ಚಾಸಾ-3 ರವರನ್ನು ಜೊತೆಯಲ್ಲಿ ಬಂದು ಜೀಪನ್ನು ಮರೆಯಾಗಿ ನಿಲ್ಲಿಸಿ ನಡೆದುಕೊಂಡು ಆರೋಪಿ ರವೀನಾಯ್ಕ ರವರ ಜಮೀನಿನಲ್ಲಿ ಬೆಳೆದಿದ್ದ ಮುಸುಕಿನ ಜೋಳದ ಫಸಲಿನಲ್ಲಿ ಮರೆಯಾಗಿ ನಿಂತು ನೋಡಲಾಗಿ ಅಲ್ಲಿ ಒಂದು ವಾಸದ ಮನೆಯಿದ್ದು ಮನೆಯ ಬಾಗಿಲು ಬೀಗ ಹಾಕಿರುವುದು ಕಂಡು ಬಂದಿರುತ್ತದೆ. ಮನೆಯ ಹತ್ತಿರ ಹೋಗಿ ನೋಡಲಾಗಿ ಅಲ್ಲಿ ಯಾರೂ ಇರುವುದಿಲ್ಲ. ಪಂಚರೊಂದಿಗೆ ಮನೆಯಿಂದ ಪೂರ್ವ ದಿಕ್ಕಿಗೆ 35 ಅಡಿ ದೂರದಲ್ಲಿ ರಾಗಿಯ ಗುಡ್ಡೆ ಇದ್ದು, ಅದರ ಸುತ್ತ ಮುತ್ತ ಪರಿಶೀಲಿಸಲಾಗಿ ಅಲ್ಲಿ ಗಾಂಜಾ ಗಿಡಗಳು ಇರುವುದು ಕಂಡು ಬಂತು. ಅದನ್ನು ನೋಡಲಾಗಿ ಸುಮಾರು 12 ಗಾಂಜಾ ಗಿಡಗಳು ಇರುವುದು ಕಂಡು ಬಂದಿದ್ದು, 5 ಅಡಿ ದೂರದಲ್ಲಿ ಮತ್ತೊಂದು ಗಿಡ ಇರುವುದು ಕಂಡು ಬಂದಿದ್ದು, ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಕಿತ್ತು ನೋಡಿದಾಗ ನಂತರ ತೂಕ ಮಾಡಿ ನೋಡಲಾಗಿ 9 ಕೆಜಿ ಹಸಿ ಗಾಂಜಾ ಇದ್ದು, ಹೂವು, ಗೊಂಡೆ, ಎಲೆ ಮಿಶ್ರಿತ ಗಾಂಜಾ ಸೊಪ್ಪು ಇರುವುದು ಕಂಡು ಬಂತು. ಸ್ಥಳದಲ್ಲಿ ಗಾಂಜಾ ಗಿಡಗಳು, ಪಂಚರು ಹಾಗೂ ಸಿಬ್ಬಂದಿಗಳೊಂದಿಗೆ ಫೋಟೋ ತೆಗೆಯಲಾಯಿತು. ಇದರಲ್ಲಿ 500 ಗ್ರಾಂನಷ್ಟು ಹಸಿ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸುವ ಸಲುವಾಗಿ ಬಿಳಿ ಬಟ್ಟೆಯಲ್ಲ್ ಹಾಕಿ ಹೊಲಿದು ಪಂಚರ ಸಹಿಯೊಂದಿಗೆ ಚಾಸಾ-1 ರವರು ಸಹಿ ಮಾಡಿದ ಚೀಟಿಯನ್ನು ಗಾಂಜಾ ಪ್ಯಾಕೆಟ್ ಗೆ ಅಂಟಿಸಿ M ಎಂಬ ಅಕ್ಷರದಿಂದ ಸೀಲು ಮಾಡಿ ಸ್ಥಳ ಮಹಜರ್ ಮಾಡಿರುತ್ತೇನೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು ಅದನ್ನು ಈಗಲೇ ನಿಪಿ-1ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ- 1 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಯಾಂಪಲ್ ಗಾಂಜಾವನ್ನು ನೋಡಿ ಗುರುತಿಸಿದದಿ'ದು ಅದನ್ನು ಈಗಾಗಲೇ ಎಂ.ಒ1 ಎಂದು ಗುರುತಿಸಲಾಗಿದೆ. ಸಾಕ್ಷಿಯು ಫೋಟೋಗಳನ್ನು ನೋಡಿ

ಗುರುತಿಸಿದ್ದು ನಿಪಿ–2 ಎಂದು ಗುರುತಿಸಲಾಗಿದೆ. ನಿಪಿ–2 ಫೋಟೋ ವನ್ನು ನನ್ನ ಮೊಬೈಲ್ ನಿಂದ ತೆಗೆದಿರುತ್ತೇನೆ. ನಂತರ ಠಾಣೆಗೆ ಬಂದು ಚಾಸಾ–1 ರವರು ಪ್ರಕರಣ ದಾಖಲಿಸಿರುತ್ತಾರೆ.

ದಿಃ20.11.2018 ರಂದು ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿದ್ದ ಗಾಂಜಾವನ್ನು ಹಾಗೂ ದಾಖಲಾತಿಗಳನ್ನು ಸಂಬಂಧಪಟ್ಟ ಎಫ್ ಎಸ್ ಎಲ್ ಬೆಂಗಳೂರಿಗೆ ಕಳುಹಿಸಿರುತ್ತೇನೆ. ಈ ಬಗ್ಗೆ ಸ್ವೀಕೃತಿಯನ್ನು ನೀಡಿದ್ದು, ಈ ಬಗ್ಗೆ ಹೇಳಿಕೆ ಯನ್ನು ದಿಃ20.11.2018 ರಂದು ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ–**2** ಫೋಟೋವನ್ನು ಸ್ಟುಡಿಯೋದಲ್ಲಿ ಪ್ರಿಂಟ್ ಹಾವಿಸಿ ಕೊಟ್ಟಿರುತ್ತೇನೆ. ನಿಪಿ–**2** ಫೋಟೋ ಬಗ್ಗೆ ಕಲಂ. **65B** ಭಾರತ ಸಾಕ್ಷ್ಯ ಅಧಿನಿಯಮ ದಾಖಲಾತಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–**8** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**8**(ಬಿ) ಎಂದು ಗುರುತಿಸಲಾಯಿತು.

ದಿಃ**01.12.2018** ರಂದು ಆರೋಪಿ ರವೀನಾಯ್ಕ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಚಾಸಾ–**1** ರವರ ಮುಂದೆ ಹಾಜರಾಗಿದ್ದು ಅವರನ್ನು ನೋಡಿರುತ್ತೇನೆ. ಈ ಬಗ್ಗೆ ನಾನು ಹೇಳಿಕೆ ಯನ್ನು ನೀಡಿರುತ್ತೇನೆ.

**ಪಾಟೀ ಸವಾಲು – ಆರೋಪಿ ಪರ ವಕೀಲರಿಂದ –**

ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**